# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 Volume:01 • ಸಂಚಿಕೆ:190 Issue:190 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 22.12.2023 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2


**ಮೈಕ್ರೋ ನ್ಯೂಸ್**

## ವಿದ್ಯುತ್ ಪ್ರಸರಣ ಮಾರ್ಗಕ್ಕೆ ದುಷ್ಕೃತ್ಯ ಎಸಗದಂತೆ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯುತ್ ಪ್ರಸರಣ ಮಾರ್ಗಕ್ಕೆ ದುಷ್ಕೃತ್ಯ ಎಸಗದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬಳ್ಳಾರಿಯ ಬೃಹತ್ ಕಾಮಗಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಸೂಚನೆ ನೀಡಿದ್ದಾರೆ. ವಿಜಯನಗರ ಜಿಲ್ಲೆ, ಕೂಡ್ಲಿಗಿ ತಾಲ್ಲೂಕು ನಿಂಬಳಗೆರೆ ಗ್ರಾಮದಲ್ಲಿ ಸ್ಥಾಪಿತಗೊಂಡಿರುವ 1*8, ಎಂವಿಎ, 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ಮತ್ತು ಸಂಬಂಧಪಟ್ಟ ಉಪಕೇಂದ್ರಕ್ಕೆ 9.357 ಕಿಲೋ ಮೀಟರಉದ್ದದ 66 ಕೆ.ವಿ. ಪ್ರಸರಣ ಮಾರ್ಗವನ್ನು ಡಿ.27ರಂದು ಅಥವಾ ನಂತರದ ದಿನಗಳಲ್ಲಿ ವಿದ್ಯುದ್ದೀಕರಿಸಲಾಗುವುದು.

ಈ ಪ್ರಸರಣ ಮಾರ್ಗವು ಉಜ್ಜಿನಿ, ನಾಗೀನಹಳ್ಳಿ, ಮಂಗಾಪೂರ ಮತ್ತು ನಿಂಬಳಗೆರೆ ಗ್ರಾಮಗಳ ಸರಿಹದ್ದಿನಲ್ಲಿ ಹಾದುಹೋಗಿದ್ದು, ಸಾರ್ವಜನಿಕರು ಈ ಮಾರ್ಗದ ವಿದ್ಯುತ್ ಗೋಪುರಗಳನ್ನು ಹತ್ತು ವುದಾಗಲಿ, ಅವುಗಳಿಗೆ ದನಕರುಗಳನ್ನು ಕಟ್ಟುವುದಾಗಲಿ, ಹಸಿರು ಬಳ್ಳಿ, ಗಿಡದ ಟೊಂಗೆಗಳನ್ನು ಅಥವಾ ಲೋಹದ ತಂತಿಗಳನ್ನು ಎಸೆಯುವುದಾಗಲಿ ಮಾಡಬಾರದು. ಇದರಿಂದ ಸಾರ್ವಜನಿಕರ ಆಸ್ತಿ-ಪಾಸ್ತಿ ಹಾಗೂ ಪ್ರಾಣಕ್ಕೆ ಹಾನಿಯಾಗುವ ಸಂಭವವಿರುತ್ತದೆ. ಇಂತಹ ಯಾವುದೇ ದುಷ್ಕೃತ್ಯಗಳನ್ನು ಎಸಗಿದಾಗ ಅಪಘಾತ ಅಥವಾ ಹಾನಿ ಉಂಟಾದಲ್ಲಿ ಅಂತಹ ಹಾನಿ ಕೃತ್ಯಗಳನ್ನು ಎಸಗಿದವರೇ ಜವಾಬ್ದಾರರಾಗಿರುತ್ತಾರೆ ಎಂದು ಸೂಚಿಸಲಾಗಿದೆ.

# ಕೆ.ಪ್ರಹ್ಲಾದ್ ಅಧ್ಯಕ್ಷ, ಎಚ್.ಎಂ.ಮಂಜುನಾಥ ಉಪಾಧ್ಯಕ್ಷರಾಗಿ ಆಯ್ಕೆ

## ಹೊಸಪೇಟೆ ವಕೀಲರ ಸಂಘದ ಚುನಾವಣೆ ಫಲಿತಾಂಶ | ವಕೀಲರ ರಕ್ಷಣೆಯೆ ಮೊದಲ ಅದ್ಯತೆ ಎಂದ ನೂತನ ಅಧ್ಯಕ್ಷ ಪ್ರಹ್ಲಾದ್

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ವಕೀಲರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆಗೆ ಬುಧವಾರ ಜರುಗಿದ ಚುನಾವಣೆಯಲ್ಲಿ ಕೆ.ಪ್ರಹ್ಲಾದ (95 ಮತ) ಅಧ್ಯಕ್ಷರಾಗಿ. ಎಚ್.ಎಂ.ಮಂಜುನಾಥಸ್ವಾಮಿ (184 ಮತ) ಉಪಾಧ್ಯಕ್ಷರಾಗಿ, ಪಿ.ಶ್ರೀನಿವಾಸ ಮೂರ್ತಿ (116 ಮತ) ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಮರಿಯಪ್ಪ (145 ಮತ) ಖಜಾಂಚಿಯಾಗಿ ಆಯ್ಕೆಯಾದ-ರೆ, ವಿ.ರವಿಕುಮಾರ್ ಜಂಟಿ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ರಿಟರ್ನಿಂಗ್ ಅಧಿಕಾರಿಗಳಾದ ಜಿ.ಕೊಟ್ರಗೌಡ ಮತ್ತು ಕೆ.ರಾಮಪ್ಪ ತಿಳಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆ.ಯುಸೂಫ್. ಬಿ.ಸಿ.ಮಹಂತೇಶ, ಕೇಶವ.ಇ.ಎ., ಹಾಜಿ ರಫಿಯಾ ಜಬೀನ್, ಬಿ.ಅಲ್ತಾಫ್ ಪಾಷಾ, ಸತೀಶ್.ಎಸ್.ಎಂ., ಆರ್.ಭಾಗ್ಯಲಕ್ಷ್ಮೀ, ಗೋಪಿ.ಆರ್., ಬಿ.ಎಚ್.ರಮೇಶ, ಎ.ಯರ್ರಿಸ್ವಾಮಿ, ಆನಂದ ಡೊಳ್ಳಿನ, ಕೆ.ರಾಘವೇಂದ್ರ ಹಾಗೂ ಜಿ.ಮಾರುತಿಸಿಂಗ್ ಆಯ್ಕೆಯಾಗಿದ್ದಾರೆ.

**ಅಧ್ಯಕ್ಷ ಸ್ಥಾನದ ಸ್ಪರ್ಧಿಗಳು:** ಕೆ.ಪ್ರಹ್ಲಾದ (95 ಮತ)




ಡಿ.ವೀರನಗೌಡ (72 ಮತ), ಕೆ.ವಿ.ಬಸವರಾಜ (53 ಮತ), ಪಿ.ವೆಂಕಟೇಶಪ್ಪ (21 ಮತ) ಸ್ಪರ್ಧಿಸಿದ್ದರು.

**ಉಪಾಧ್ಯಕ್ಷ ಸ್ಥಾನದ ಸ್ಪರ್ಧಿಗಳು:** ಎಚ್. ಎಂ.ಮಂಜುನಾಥಸ್ವಾಮಿ (184 ಮತ), ಎಚ್. ಎಸ್.ದಿವಾಕರ ರಾವ್ (58 ಮತ) ಸ್ಪರ್ಧಿಸಿದ್ದರು.

**ಪ್ರಧಾನ ಕಾರ್ಯದರ್ಶಿ ಸ್ಥಾನದ ಸ್ಪರ್ಧಿಗಳು** : ಶ್ರೀನಿವಾಸ ಮೂರ್ತಿ (116 ಮತ), ಪಿ.ನಾಗಭೂಷಣ (73 ಮತ), ಶ್ರೀಕೃಷ್ಣದೇವರಾಯಲು.ಬಿ. (52 ಮತ) ಸ್ಪರ್ಧಿಸಿದ್ದರು.

**ಖಜಾಂಚಿ ಸ್ಥಾನದ ಸ್ಪರ್ಧಿಗಳು:** ಎ.ಮರಿಯಪ್ಪ (145 ಮತ), ರಾಜಾಮೊಹ್ಮದ ಎನ್.ಬಡಿಗೇರ್ (96 ಮತ) ಸ್ಪರ್ಧಿಸಿದ್ದರು. 252 ಮತಗಳ ಪೈಕಿ 242 ಮತದಾನವಾಗಿವೆ, ಅಧ್ಯಕ್ಷ ಸ್ಥಾನಕ್ಕೆ 3, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ 3 ಮತ್ತು ಖಜಾಂಚಿ ಸ್ಥಾನಕ್ಕೆ 2 ಮತಗಳು ಅಸಿಂಧುಗೊಂಡಿವೆ ಎಂದು ತಿಳಿಸಿದ್ದಾರೆ.



**ವಕೀಲರ ಮೇಲಾಗುತ್ತಿರುವ ಹಲ್ಲೆಗಳಿಗೆ ಕಡಿವಾಣ ಮತ್ತು ವಕೀಲರ ರಕ್ಷಣೆಯೇ ನನ್ನ ಮೊದಲ ಅದ್ಯತೆಯಾಗಿದೆ. ಯುವ ವಕೀಲರಿಗೆ ಅರಿವು ಕಾರ್ಯಕ್ರಮಗಳು ಸೇರಿದಂತೆ ವಕೀಲರ ಸಂಘದ ಶ್ರಯೋಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತೇನೆ. ಸಂಘದ ಲೆಕ್ಕಪತ್ರಗಳು ಪಾರದರ್ಶಕವಾಗಿರಲಿವೆ. ವಯಸ್ಸಿನ ಹಿರಿತನವನ್ನು ಗೌರವಿಸಿ ನನ್ನನ್ನು ಆಯ್ಕೆ ಮಾಡಿದವರಿಗೆ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ವಕೀಲರಿಗೂ ಮತ್ತು ಹಿರಿಯರಿಗೂ ಧನ್ಯವಾದಗಳು**

**– ಕೆ.ಪ್ರಹ್ಲಾದ್ ನೂತನ ಅಧ್ಯಕ್ಷರು, ಹೊಸಪೇಟೆ ವಕೀಲರ ಸಂಘ, ವಿಜಯನಗರ**



# ಆರೋಗ್ಯ ಇಲಾಖೆ ಸಿಬ್ಬಂದಿಯ ವಿಶೇಷ ಆರೈಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಾರ್ವಜನಿಕರೊಂದಿಗೆ ಅತ್ಯಂತ ಸ್ನೇಹಮಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಎಲ್ಲಾರಿಗೂ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ. ರಮೇಶಬಾಬುರವರು.

ಇತ್ತೀಚಿಗೆ ಕುರುಗೋಡು ತಾಲ್ಲೂಕು ಯರಂಗಳಿಗಿ ಗ್ರಾಮದಲ್ಲಿ ನಡೆದ ಘಟನೆ ಹಾಗೂ ಅದಕ್ಕೆ ಇಲಾಖೆಯ ಸಿಬ್ಬಂದಿಗಳು ಸ್ಪಂದಿಸಿದ ರೀತಿಗೆ ಅವರು ಅಭಿನಂದನೆ ಸಲ್ಲಿಸಿದ್ದಾರೆ.

*ಘಟನೆ ವಿವರ:*

ಗಂಡ ಮಾತು ಬಾರದ ಮೂಕ, ಮನೆಯಲ್ಲಿ ಆರೈಕೆ ಮಾಡಲು ಯಾರು ಇಲ್ಲ, ವಯಸ್ಸಾದ ಅಜ್ಜಿ ಹಾಸಿಗೆ ಮೇಲೆ. ಇದು ಯರಂಗಳಿಗಿ ಗ್ರಾಮದ ಮಮ್ತಾಜ್ ಗಂಡ ರಾಜಭಕ್ಷಿ ಅವರ ಜೀವನ ಕ್ರಮ.

ಮದುವೆ ನಂತರ ಮೊದಲ ಹೆರಿಗೆಯಾದ ತಕ್ಷಣ ಮಗು ಮರಣ ಹೊಂದಿದ್ದು, ತದನಂತರ ಎರಡು ಬಾರಿಯೂ ಗರ್ಭಪಾತವಾಗಿದ್ದು, ಪ್ರಸ್ತುತ ನಾಲ್ಕನೇ ಬಾರಿ ಗರ್ಭಿಣಿಯಾದ ಸಂದರ್ಭದಲ್ಲಿ ಆರೋಗ್ಯ ಇಲಾಖೆಯು ನಿರಂತರ ನಿಗಾವಹಿಸಲಾಗಿತ್ತು.

ಜ.4 ನೇ ತಾರೀಖಿನಂದು ನಿರೀಕ್ಷಿತ ಹೆರಿಗೆ ದಿನಾಂಕವಿತ್ತು. ಆದರೆ ಹೆರಿಗೆ ನೋವು ಡಿ.19 ರಂದು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಗ್ರಾಮದ ಆಶಾ ಕಾರ್ಯಕರ್ತೆ ಶೋಭಾ ಅವರು ತಕ್ಷಣ ಮಾಹಿತಿಯಿಂದ ಮನೆಗೆ ಭೇಟಿ ನೀಡಿ, ಕೋಳೂರು >>2

# ದೇವರಿಗೆ ಕೊಡುವಷ್ಟು ದೊಡ್ಡವರಲ್ಲ ನಮ್ಮದು ಅಳಿಲು ಸೇವೆ: ಶ್ಯಾಮಸಿಂಗ್

## ಜೋಡಿ ರಥಗಳ ನಿರ್ಮಾಣ ಕಾಮಗಾರಿಗೆ ಚಾಲನೆ | 2 ಕೋಟಿ ದೇಣಿಗೆ



**ದೇವಸ್ಥಾನದಲ್ಲಿ ಶ್ರೀ ವಿಷ್ಣು ಸಹಸ್ರನಾಮ, ಶ್ರೀ ಲಲಿತ ಸಹಸ್ರನಾಮ ಮತ್ತು ಹನುಮಾನ್ ಚಾಲೀಸ್ ಪಠಣದೊಂದಿಗೆ ಉಭಯ ದೇವರುಗಳಿಗೆ ವಿಶೇಷ ಪೂಜೆಸಲ್ಲಿಸಲಾಯಿತು. ಜೋಡಿ ರಥಗಳ ನಿರ್ಮಾಣ ಕಾಮಗಾರಿಗೆ ಪಟ್ಟಣಕ್ಕೆ ಆಗಮಿಸಿದ ತೇಗ, ಹೊನ್ನೆ, ಭೋಗಿ ಶಿವನಿ ಕಟ್ಟಿಗೆಯ ದಿನ್ನೆಗಳನ್ನು ಹೊತ್ತು ಬಂದ ವಾಹನಗಳಿಗೆ ಮೆರವಣಿಗೆ ಮೂಲಕ ಪಟ್ಟಣದಲ್ಲಿ ಸಂಚರಿಸಿ ದೇವಸ್ಥಾನದ ಮುಂದೆ ವಿಶೇಷ ಪೂಜೆ ಸಲ್ಲಿಸಲಾಯಿತು. ಎರಡೂ ರಥಗಳ ನಿರ್ಮಾಣ ವೆಚ್ಚದ ದೇಣಿಗೆಯ ಬೇಡಿಕೆ ಫಲಕ ಮತ್ತು ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ಹಾಗೂ ಆಂಜನೇಯಸ್ವಾಮಿ ದೇವಸ್ಥಾನದ ಪ್ರಸ್ತಾವಿತ ಕ್ರಿಯಾಯೋಜನೆಯ ನೀಲಿ ನಕ್ಷೆ ಫಲಕವನ್ನು ಶಾಸಕರು ಅನಾವರಣ ಮಾಡಿದರು.**

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ದೇವರು ಕೊಟ್ಟ ಸಂಪತ್ತಿನಲ್ಲಿ ಅಲ್ಪ ಪ್ರಮಾಣವಾದರೂ ಸಮಾಜಕ್ಕೆ ಬಳಸಬೇಕು. ನಮಗೆ ಸೇವೆ ಮಾಡಲು ಸಿಕ್ಕ ಭಾಗ್ಯವಿದು. ನಾವು ದಾನಿಗಳಲ್ಲ ದೇವರ ಆಜ್ಞಾನುಸಾರಿಗಳು ಎಂದು ಗಣಿ ಉದ್ಯಮಿ ದಾನಿ ಶಾಮರಾಜ್ ಸಿಂಗ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀ ಆಂಜನೇಯ ಸ್ವಾಮಿ ಹಾಗೂ ಲಕ್ಷ್ಮೀ ನಾರಾಯಣಸ್ವಾಮಿ ದೇವರುಗಳ ಜೋಡಿ ರಥಗಳ ನಿರ್ಮಾಣಕ್ಕೆ ಗುರುವಾರ ಚಾಲನೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ದೇವರನ್ನೆ ನಿತ್ಯ ಬೇಡುವ ಮನುಜರು ನಾವುಗಳು. ದೇವರ ಮೇಲೆ ನಂಬಿಕೆ ಇಟ್ಟವರಿಗೆ ಎಂದೂ ಕೈಬಿಟ್ಟಿಲ್ಲ. ಗಳಿಸಿ ಕೂಡಿಡುವ ಹಣಕ್ಕಿಂತ ಸತ್ಕಾರ್ಯಗಳಿಗೆ ನೀಡುವುದರಲ್ಲಿ ಆತ್ಮತೃಪ್ತಿ ಕಾಣಬಹುದು ಎಂದರು.

ದಾನಿಗಳಾದ ಜಯರಾಜ್ ಸಿಂಗ್ ಮಾತನಾಡಿ, ನೂತನ ಜೋಡಿ ರಥಗಳ ಸಿದ್ಧತೆಗೆ ದೇವರ ಕೃಪೆಯಿಂದ ನಮ್ಮ ಅಳಿಲು ಸೇವೆ ಸಲ್ಲಿಸುತ್ತಿದ್ದೇವೆ. ಈ ಪುಣ್ಯದ ಕೆಲಸಕ್ಕೆ ಎಲ್ಲರೂ ಕೈಜೋಡಿಸೋಣ. ಭಕ್ತಾದಿಗಳು ತುಂಬು ಮನಸ್ಸಿನಿಂದ ತನುಮನಧನಗಳನ್ನು ಅರ್ಪಿಸಬೇಕೆಂದರು.

ಶಾಸಕ ಕೆ.ನೇಮಿರಾಜ್ ನಾಯ್ಕ ಮಾತನಾಡಿ, ಲಕ್ಷ್ಮೀ ನಾರಾಯಣ ಸ್ವಾಮಿ ಹಾಗೂ ಆಂಜನೇಯಸ್ವಾಮಿ ಉಭಯ ದೇವರುಗಳ ಮೂಲ ದೇವಸ್ಥಾನವು ತುಂಗಭದ್ರಾ ಆಣೆಕಟ್ಟು ಹಿನ್ನೀರಿನಲ್ಲಿ ಮುಳುಗಡೆಯಾದ ಮಲ್ಲಾಪುರ ತಾಲೂಕಿನ ನಾರಾಯಣದೇವರ ಕೆರೆ ಆಗಿತ್ತು. ಅಣೆಕಟ್ಟಿಗಾಗಿ ಹಿನ್ನೀರಿನಲ್ಲಿ ಮುಳುಗಡೆಯಾದ ನಂತರ ಅಲ್ಲಿನ ಜನರೂ ಅವರ ಸಂಸ್ಕೃತಿಯೂ ಬೇರೆ ಬೇರೆಕಡೆ ಸ್ಥಳಾಂತರಗೊಂಡಿತು ಈ ಉಭಯದೇವರುಗಳ ಮೂರ್ತಿಗಳನ್ನು ಜೋಡಿ ರಥಗಳನ್ನು ಮರಿಯಮ್ಮನಹಳಿಗೆ ಸ್ಥಳಾಂತರಗೊಳಿಸಲಾಯಿತು. ಈ




ಐತಿಹಾಸಿಕ ಜೋಡಿ ರಥಗಳು ಜೀರ್ಣಗೊಂಡ ಹಿನ್ನಲೆಯಲ್ಲಿ ದೇವಸ್ಥಾನ ಸಮಿತಿ ಜೋಡಿ ರಥಗಳ ನಿರ್ಮಾಣಕ್ಕೆ ಮುಂದಾಗಿದ್ದು, ಶಾಮರಾಜ್ ಸಿಂಗ್1.5 ಕೋಟಿ ರೂ ಹಾಗೂ ಜಯರಾಜ್ ಸಿಂಗ್ 50 ಲಕ್ಷ ರೂ ಉದಾರ ಮನಸ್ಸಿನಿಂದ ದೇಣಿಗೆ ನೀಡುವ ಮೂಲಕ ಈ ಧಾರ್ಮಿಕ ಕಾರ್ಯಕ್ಕೆ ಮುಂದಾಗಿರುತ್ತಾರೆ. ಈ ಮೂಲಕ ಅವರ ತಂದೆ ಬಾಲಾಜಿ ಸಿಂಗ್ ಅವರ ಹೆಸರನ್ನು ಅಜರಾಮರಗೊಳಿಸಿದ್ದಾರೆ ಎಂದರು.

ಪ್ರಾಸ್ತಾವಿಕವಾಗಿ ಸಮಿತಿಯ ಸದಸ್ಯರಾದ ಚಿದ್ರಿ ಸತೀಶ್ ಮಾತನಾಡಿದರು. ದೇವಸ್ಥಾನ ಸಮಿತಿ ಸದಸ್ಯರಾದ ಗೋವಿಂದರ ಪರಶುರಾಮ, ದೊಡ್ಡ ರಾಮಣ್ಣ, ಬಿ.ರೂಪ. ಎಂ.ವೆಂಕಟೇಶ್, ಪ್ರಕಾಶನಾಯ್ಕ, ಮಜ್ಜಿಗಿ ಶಿವಪ್ಪ, ಈ ಯರ್ರಿಸ್ವಾಮಿ, ಸಣ್ಣ ದುರುಗಪ್ಪ, ನಾಗೇಶ್ ವಿ.ಎನ್., ಡಿ.ನರಸಿಂಹ ಮೂರ್ತಿ, ಸಜ್ಜೇದ್ ವಿಶ್ವನಾಥ, ಕೆ.ರಘವೀರ್, ಬಿ.ರುದ್ರಮುನಿ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ದಾನಿಗಳಾದ ಶಾಮರಾಜ್ ಸಿಂಗ್ ಹಾಗೂ ಜಯರಾಜ್ ಸಿಂಗ್, ಎಸ್.ಎಲ್.ಆರ್. ಮೆಟಾಲಿಕ್ಸ್ ನ ನವೀನ್ ಕುಮಾರ್ ಜೈನ್, ಮಂಜುನಾಥ ಇವರಿಗೆ ದೇವಸ್ಥಾನ ಅಭಿವೃದ್ಧಿ ಸಮಿತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ನೇಹಾ ಪ್ರಾರ್ಥಿಸಿದರು. ಸದಸ್ಯ ಕಾರ್ಯದರ್ಶಿ ಹಾಗೂ ಉಪತಹಸೀಲ್ದಾರ ನಾಗರಾಜ ಹೆಚ್ ನಿರ್ವಹಿಸಿದರು.

